# ದೇವರ ಹೊಲ



ಹುಲಿಕುಂಟೆ ಮೂರ್ತಿ

ಕಲೆ: ವೆಂಕಟ್ರಮಣ ಭಟ್

ಹೊಸ್ತಿಲ ಬಳಿ ಕುಳಿತು ಜಯಮ್ಮನವರು ಪೇಪರ್ ಕಪ್ಪಿನಲ್ಲಿ ತಂದುಕೊಟ್ಟ ಟೀ ಕುಡಿಯುತ್ತಾ ಭರಮಪ್ಪ ಗೌಡರ ರಾಜಕೀಯ ವರಾತಗಳನ್ನು ಕೇಳಿಸಿಕೊಳ್ಳುತ್ತಿದ್ದ ದೇವರು, ನಡುಮನೆಯ ದೊಡ್ಡ ಟೀವಿಯಲ್ಲಿ ಬರುತ್ತಿದ್ದ ತನ್ನಂಥದ್ದೇ ವ್ಯಕ್ತಿಯನ್ನು ಕಣ್ಣು ಕಿರಿದು ಮಾಡಿಕೊಂಡು ನೋಡತೊಡಗಿದ. ದೇವರ ಟೀವೀ ಕುತೂಹಲವನ್ನು ಗಮನಿಸಿದ ಶಾಂತಮ್ಮ 'ಈ ಹಾಳಾದ್ ಮಳೆ ಹುಯ್ದು ರಾತ್ರೆಯಿಂದ ಕೇಬಲ್ ಬತ್ತಿಲ್ಲ; ಈ ಚಂದನ ಒಂದ್ ಬತ್ತದೆ... ನಮ್ಮನೆ ದೆವ್ವ ಒಂದೇ ನೋಡದು ಅದುನ್ನ; ಆ ದಾರ್ವಾಹಿ ಹುಡ್ಗಿ ಪಾಡೇನಾಯ್ತೋ ಪಾಪ' ಅಂದು ಅದ್ಯಾವುದೋ ಧಾರಾವಾಹಿಯ ಹೆಸರು ಹೇಳುತ್ತಾ ಟೀವಿಯಲ್ಲಿ ಬರುತ್ತಿದ್ದ 'ಚೋಮನ ದುಡಿ' ಸಿನಿಮಾದ ಬಗ್ಗೆ ತಮ್ಮದಲ್ಲದ ಭಾಷೆಯ ಸಿನಿಮಾದಂತೆ ಅಸಡ್ಡೆಯಿಂದ ಮಾತನಾಡಿದರು. ಅವರು ದೆವ್ವ ಅಂದಿದ್ದು ತಮ್ಮನ್ನೇ ಎಂದು ಗೊತ್ತಿದ್ದರೂ ಗೌಡರು ತುಟಿಬಿಚ್ಚಲಿಲ್ಲ; ಕೇಬಲ್ ಕೈಕೊಡುವುದನ್ನೇ ಕಾಯುತ್ತಾ ಕೂತಿರುತ್ತಿದ್ದವರು ಕರೆಂಟು ಹೋದಾಗ ಮಾತ್ರ ಟೀವಿ ಬಂದ್ ಮಾಡುತ್ತಿದ್ದರು. ಚಂದನದಲ್ಲಿ ಬರುವ ಕಾರ್ಯಕ್ರಮಗಳೆಂದರೆ ಅವರಿಗೆ ಅಚ್ಚುಮೆಚ್ಚು. ಆದರೆ, ದೇವರು ಶಾಂತಮ್ಮನವರ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಅವನು ತನ್ನಂಥದ್ದೇ ಒಂದು ಪಾತ್ರ ಟೀವಿಯಲ್ಲಿ ಬರುತ್ತಿದ್ದುದಕ್ಕೆ ಅವಾಕ್ಕಾಗಿದ್ದ ಮತ್ತು ನಿಜಕ್ಕೂ ಆ ಸಿನಿಮಾ ಯಾವುದರ ಬಗ್ಗೆ ಇರಬಹುದು ಎಂದು ತಲೆಕೆಡಿಸಿಕೊಂಡಿದ್ದ. ಭರಮಪ್ಪಗೌಡರು, 'ಕೆಳಜಾತಿಗಳಿಗೆ ಮೀಸಲಾತಿ ಕೊಟ್ಟು ರಾಜಕೀಯ ಮಾಡುತ್ತಿವೆ' ಎಂಬ ತಮ್ಮ ಎಂದಿನ ರಾಜಕೀಯ ಪಕ್ಷಗಳ ಬಗೆಗಿನ ಅಸಹನೆಯನ್ನು ದಕ್ಕಲ ಜಾತಿಗೆ ಸೇರಿದ ದೇವರ ಕಿವಿಗೆ ಊದುತ್ತಿರುವುದಕ್ಕೆ ನಿರ್ದಿಷ್ಟ ಕಾರಣವೇನೂ ಇರಲಿಲ್ಲ.

ಈ ದೇವರು ಆ ದೇವರಲ್ಲ; ಎಲ್ಲಿಂದಲೋ ಬಂದು ಜಂಗಮಳ್ಳಿಯಲ್ಲಿ ನೆಲೆಸಿದ್ದ ದಕ್ಕಲ ಸಮುದಾಯದ ದೇವರು ಹುಟ್ಟುವಾಗಲೇ ಅದೆಂಥದ್ದೋ ರೋಗಕ್ಕೆ ಗುರಿಯಾಗಿ ಬದುಕುಳಿದಿದ್ದರಿಂದ ಅವನ ತಂದೆ ಅವನನ್ನು 'ದೇವರು' ಎಂದು ಕರೆದದ್ದೇ ಹೆಸರಾಗಿ ಉಳಿದಿತ್ತು. ತಮ್ಮ ತಂದೆತಾಯಿಗಳೆಂದೇ ಭಾವಿಸುವ ಮಾದಿಗರ ಮೂವತ್ತಕ್ಕೂ ಹೆಚ್ಚು ಮನೆಗಳಿರುವ ಜಂಗಮಳ್ಳಿ ದೇವರ ಕುಟುಂಬಕ್ಕೆ ವಾಸಯೋಗ್ಯವಾಗಿತ್ತು. ಮೂರು ತಿಂಗಳಿಗೋ ಆರು ತಿಂಗಳಿಗೋ ತಮ್ಮ ಕುಲಮೂಲ ಆಚರಣೆಗಾಗಿ ಈ ಊರಿನ ಮಾದಿಗ ಕೇರಿಗೆ ಬಂದು ಭಿಕ್ಷೆ ತೆಗೆದುಕೊಂಡು ಮರೆಯಾಗುತ್ತಿದ್ದ ದೇವರ ತಂದೆತಾಯಿ ಇಬ್ಬರಿಗೂ ಜಂಗಮಳ್ಳಿಯೆಂದರೆ ತುಂಬು ಪ್ರೀತಿ. ದೇವರ ಬಾಲ್ಯದಲ್ಲಿ ಅಪ್ಪನ ಹೆಗಲ ಮೇಲೆ ಕೂತು ತಿರುಗಿದ ಹತ್ತಾರು ಹಳ್ಳಿಗಳಲ್ಲಿ ಈ ಊರು ಅದ್ಯಾಕೋ ತುಂಬಾ ಹಿಡಿಸಿತ್ತು. ಆ ಕಾರಣಕ್ಕಾಗಿ ಅಪ್ಪ ತನ್ನ ಕೊನೆಗಾಲದಲ್ಲಿ ಇಡೀ ಸಂಸಾರ ಕರೆದುಕೊಂಡು ಈ ಊರಿಗೆ ಬಂದು ನೆಲೆಸಿದರು. ದೇವರು ಚಿಕ್ಕವನಿದ್ದಾಗಲೇ ತನಗಿಂತಲೂ ಮೂರ್ನಾಲ್ಕು ವರ್ಷ ಹಿರಿಯರಾದ ಅಣ್ಣ ಸಿಂಗಾರಿ ಮತ್ತು ಅಕ್ಕ ದೇವಿಯನ್ನು ಕಳೆದುಕೊಂಡಿದ್ದ. ಅವರು ಕೆರೆಗೆ ಮೀನು ಹಿಡಿಯಲು ಹೋಗಿ ಮುಳುಗಿಹೋಗಿದ್ದರು. ದಲಿತ ಸಂಘರ್ಷ ಸಮಿತಿಯ ಮುಖಂಡ, ಯಾವ ಅಧಿಕಾರಿ ರಾಜಕಾರಣಿಯ ಮುಂದೆ ನಿಂತೂ ಜೋರು ಧ್ವನಿಯಲ್ಲಿ ಮಾತಾಡಿ ಅವರ ಬೆವರಿಳಿಸುತ್ತಿದ್ದ ಲಂಕೆಪ್ಪನವರ